ಅಧ್ಯಕ್ಷರು :- ಪ್ರಸ್ತಾವ ಏನೆಂದರೆ,

"2007ನೇ ಸಾಲಿನ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು ಮತ್ತು ಅನುಮತಿ ನೀಡಲಾಯಿತು

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಆರೋಗ್ಯ ಸಚಿವರ ಪರವಾಗಿ) :- ಮಾನ್ಯ ಅಧ್ಯಕ್ಷರೆ, 2007ನೇ ಸಾಲಿನ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :- ವಿಧೇಯಕವನ್ನು ಮಂಡಿಸಲಾಗಿದೆ.

(ಅನುಬಂಧ-1)

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಕಾಕಾ ಸಾಹೇಬ್ ಪಾಂಡುರಂಗ ಪಾಟೀಲ್ ಮತ್ತು ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿಯವರು ಸದನದ ಬಾವಿಗೆ ಬಂದರು)

(ಗೊಂದಲ)

ಅಧ್ಯಕ್ಷರು :- ಏನ್ರೀ ಇದು? ನೀವು ಮಂತ್ರಿಗಳೂ ಸಹ ಆಗಿದ್ದೀರಿ. ಏನಿದು ತಮಾಷೆ? ನನ್ನ ಪರ್ಮಿಷನ್ ತೆಗೆದುಕೊಳ್ಳದೇ ಮಾತನಾಡಬೇಕೆಂದರೆ ಹೇಗೆ?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ,....

(ಗೊಂದಲ)

ಅಧ್ಯಕ್ಷರು :- ನಿಮ್ಮ ಕುಮ್ಮಕ್ಕು ಇಲ್ಲದೆ ಈ ರೀತಿ ಆಗುವುದಿಲ್ಲ. No ಇಂದು ಅವಕಾಶ ಕೊಡುತ್ತೇನೆ ಎಂದು ಹೇಳಿದರೂ ಕೂಡ, ಅವರು ವೆಲ್‌ಗೆ ಬರುವುದು ಎಂದರೆ, ಅದರ ಅರ್ಥವೇನು? ನಾನು ನೇಮ್ ಮಾಡಬೇಕಾಗುತ್ತದೆ. ಎಲ್ಲಾ ವಿಚಾರ ತಿಳಿದುಕೊಂಡಿದ್ದಾರೆ.

(ಗೊಂದಲ)

ನಾನು ಈಗ ನಿಮ್ಮನ್ನು ನೇಮ್ ಮಾಡಬೇಕಾಗುತ್ತದೆ. ನಿಮಗೆ ಇಷ್ಟ ಬಂದ ರೀತಿಯಲ್ಲಿ ಬರುವುದು, ತಲೆ ಮೇಲೆ ಕುಳಿತುಕೊಳ್ಳತಕ್ಕಂಥದ್ದು, ಹೆದರಿಸಿ, ಗದರಿಸಿ ಇದು ಮಾಡತಕ್ಕಂಥದ್ದು, ಇದು ನಿಯಮಗಳಿಗೆ ವಿರೋಧ.

(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಮಾನ್ಯ ಸದಸ್ಯರು ಮಾತನಾಡುತ್ತಿದ್ದರು)

No, ನಾನು ಅವಕಾಶ ಕೊಡುವುದಿಲ್ಲ. ನೀವು ನಿಂತುಕೊಳ್ಳಿ.

(ಗೊಂದಲ)

ಅಧ್ಯಕ್ಷರು :- ನೋ, ನಾನು ಕೇಳುವುದಕ್ಕೆ ರೆಡಿ ಇಲ್ಲ, ಏತಕ್ಕೆ ಬಾವಿಗೆ ಬಂದಿದ್ದಾರೆ, ನಾನು ನಾಳೆ ಅವಕಾಶ ಕೊಡುತ್ತೇನೆಂದು ಹೇಳಿದ್ದನ್ನು ಕೇಳಬೇಕಾಗಿತ್ತು, ನಾಳೆ ಕೇಳಿದ್ದರೆ ಆಕಾಶ ಕೆಳಗೆ ಬೀಳುತ್ತಿತ್ತೇನು? (ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅಧ್ಯಕ್ಷರೆ, ಸ್ವಲ್ಪ ಕೇಳಿ....

ಅಧ್ಯಕ್ಷರು :- ಏನು ಕೇಳುತ್ತಿರಿ? ಏನಾಗಿದೆ ಎಂದರೆ, ಅಶಿಸ್ತು, ಅಶಿಸ್ತು ಮಾಡಿ, ಅದನ್ನೆ ಚಾಸ್ತಿ ಮಾಡುವುದನ್ನು ನಾನು ನೋಡಿಕೊಂಡು ಕುಳಿತುಕೊಳ್ಳಬೇಕಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನಾನು ಕೈ ಎತ್ತಿ ಕೇಳುತ್ತೇನೆ, ಬೇರೆಯವರ ರೀತಿ ಎದ್ದು ನಿಂತು ಹೇಳುವುದಿಲ್ಲ.

ಅಧ್ಯಕ್ಷರು :- ಅಲ್ಲ ಸ್ವಾಮಿ ಅವರು ಬಾವಿಗೆ ಏತಕ್ಕೆ ಬಂದರು ಹೇಳಿ?

6. <u>ಅಧ್ಯಕ್ಷರ ಅಪ್ಪಣೆ ಮೇರೆಗೆ</u>

ವಿಷಯ :- ನಿಪ್ಪಾಣಿ ತಾಲ್ಲೂಕಿನ ತಂಬಾಕು ಬೆಳೆಗಾರರ ಬವಣೆ ಬಗ್ಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅವರು ಏತಕ್ಕೆ ಬಂದರೆಂದರೆ, ನಿಪ್ಪಾಣಿಯಲ್ಲಿ ತಂಬಾಕು ಬೆಳೆಗಾರರು ಇದ್ದಾರೆ. ನಿಪ್ಪಾಣಿಯಲ್ಲಿ, ಆ ತಂಬಾಕಿನ ಮೇಲೆ 12% ವ್ಯಾಟ್ ಹಾಕಿದ್ದಾರೆ. ಪಕ್ಕದ ರಾಜ್ಯವಾದ ಮಹಾರಾಷ್ಟ್ರದಲ್ಲಿ ಆ 12% ವ್ಯಾಟ್ ಅನ್ನು ತೆಗೆದು ಹಾಕಿದ್ದಾರೆ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ತಂಬಾಕು ಬೆಳೆಗಾರರಿಗೆ ಮತ್ತು ಬೀಡಿ ತಯಾರಕರಿಗೆ ತೊಂದರೆಯಾಗಿದೆ. ಆ 12% ವ್ಯಾಟ್ ಇರುವುದರಿಂದ ಏನಾಗಿದೆ ಎಂದರೆ, ಎಲ್ಲಾ ರೈತರು ಮಹಾರಾಷ್ಟ್ರದಿಂದ ಇಲ್ಲಿಗೆ

ಬರುತ್ತಾರೆ ಹೊರತು, ಇಲ್ಲಿನವರು ಅಲ್ಲಿ ತಂಬಾಕನ್ನು ಮಾರಾಟ ಮಾಡುತ್ತಿಲ್ಲ, ಏಕೆಂದರೆ 12% ವ್ಯಾಟ್ ಜಾಸ್ತಿಯಾಯಿತು, ಅದಕ್ಕೆ ಅವರು exempt ಮಾಡಿದ್ದಾರೆ. ನಿಮಗೆ ಗೊತ್ತಿರುವಂತೆ ಹುಣಸೂರು, ನಿಪ್ಪಾಣಿ, ಸ್ವಲ್ಪ ಚಿಕ್ಕೋಡಿ ಈ ಭಾಗಬಿಟ್ಟರೆ ತಂಬಾಕು ಬೇರೆ ಕಡೆ ಬೆಳೆಯುವಂತಲ್ಲ. ಹುಕ್ಕೇರಿ ಇರಬಹುದು, ಚಿಕ್ಕೋಡಿ ಇರಬಹುದು, ಹುಣಸೂರಿರಬಹುದು, ಮೈಸೂರಿನ ಕೆಲವು ಭಾಗಗಳಲ್ಲಿ ತಂಬಾಕು ಬೆಳೆಯುತ್ತಾರೆ. ಅದಕ್ಕೆ 12% vat exemption ನೀಡುವುದು. ದಯವಿಟ್ಟು ಇದು ರೈತರಿಗೆ ಅನುಕೂಲವಾಗತಕ್ಕಂತಹದ್ದು.

ಅಧ್ಯಕ್ಷರು :– ಸದಸ್ಯರು ಬಂದು, ನನಗೆ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳುವುದು ಬಿಟ್ಟು, ಬಂದು ಇಲ್ಲಿ ನಿಂತುಕೊಂಡು ಮಾತನಾಡಿದರೆ ಹೇಗೆ? ನಾನು ನಾಳೆ ಅವಕಾಶ ಕೊಡುತ್ತೇನೆಂದರೂ ಕೇಳುವುದಿಲ್ಲ, ಏಕ್‌ದಂ ಬಂದು ಬಿಡುವುದು, ಈ ತರಹ ಆದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಸರ್, ಕ್ಷಮಿಸಿ ತಪ್ಪಾಗಿದೆ, ನಾನು ಅವರ ಪರವಾಗಿ ಕ್ಷಮೆ ಕೇಳುತ್ತೇನೆ, ಇದು ಬಹಳ ಜ್ವಲಂತ ಸಮಸ್ಯೆಯಾಗಿದೆ. ಅವರು ಅಲ್ಲಿ ಬಂದ್ ಮಾಡಿ ಸಾಕಷ್ಟು ಸಲ ಇದನ್ನು ಸರ್ಕಾರದ ಗಮನಕ್ಕೆ ತರುವ ಪ್ರಯತ್ನವನ್ನು ಮಾಡಿದ್ದಾರೆ. ಅದಕ್ಕೆ ಹಣಕಾಸಿನ ಸಚಿವರು ಗಮನ ಕೊಡಬೇಕು, ಮಾನ್ಯ ಮುಖ್ಯಮಂತ್ರಿಯವರು ಡೈರೆಕ್ಷನ್ ಕೊಡಿ, ನೀವು ಬೇಕಾದರೆ ಮಹಾರಾಷ್ಟ್ರದ್ದನ್ನು ವೆರಿಫೈ ಮಾಡಿ, ಅಲ್ಲಿನ ರೈತರಿಗೆ ಈ ಕನ್ಸೆಷನ್ ಕೊಟ್ಟಿದ್ದರೆ ನೀವು ಕೊಡಿ, ಇಲ್ಲವೆಂದರೆ ಬೇಡ. ಅಲ್ಲಿ ಮಹಾರಾಷ್ಟ್ರ ಸರ್ಕಾರದ ಆಜ್ಞೆಯು ಇದೆ. ದಯವಿಟ್ಟು ತಾವು ಈ ಬಗ್ಗೆ ಡೈರೆಕ್ಷನ್ ಕೊಡಿ. ಏಕೆಂದರೆ, ಹಣಕಾಸಿನ ಸಚಿವರು ಬರಲೆಂದರೆ ಈಗ ಅವರಿಲ್ಲ. ಏಕೆಂದರೆ, ಇಲ್ಲಿ ಅಸೆಂಬ್ಲಿ ನಡೆದಿದೆ ಅವರು ವಿಕಾಸಯಾತ್ರೆ, ಆ ಯಾತ್ರೆ, ಈ ಯಾತ್ರೆ ಕೊನೆಗೆ ಸನ್ಯಾಸ ಯಾತ್ರೆ ಮಾಡಿಕೊಂಡು ಅವರು ಹೋದರೆ ಈ ಅಸೆಂಬ್ಲಿ ಗತಿ ಏನು? ಕನಿಷ್ಟ ಪಕ್ಷ ಅಸೆಂಬ್ಲಿ ಮುಗಿದ ಮೇಲೆ ಎಲ್ಲಾ ಯಾತ್ರೆಗಳನ್ನು ಮಾಡಲಿ, ಬೇಡವೆಂದು ಹೇಳುವುದಿಲ್ಲ. ಎಲ್ಲರಿಗೂ ಪಕ್ಷದ ಕಾರ್ಯಕ್ರಮಗಳಿರುತ್ತವೆ, ಆ ಪಕ್ಷದಿಂದ ಶಾಸಕರಾಗಿ ಬರುತ್ತಾರೆ ಮಾಡಲಿ. ಆದರೆ ಸದನ ನಡೆಯುವಾಗ , ನೀವು ಗಂಭೀರವಾಗಿ ನಮ್ಮ ಮೇಲೆ ಬೀಳುತ್ತೀರಿ. ಅವರ ಮೇಲೆ ಏತಕ್ಕೆ ಬೀಳಬಾರದು? ಏತಕ್ಕೆ ಅಟೆಂಡ್ ಮಾಡಬಾರದು? ಏಕೆ ಬರಬಾರದು?

ಅಧ್ಯಕ್ಷರು :– ಸ್ವಾಮಿ, ನಾನು ಅವತ್ತೆ, ದಿನ ಸಾಯುವವರಿಗೆ ಅಳುವವರ್ಯಾರೆಂದು ಹೇಳಿದ್ದೇನಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಹಾಗಾದರೆ, ಅವರು ದಿನಾ ಹೇಗೆ ಮಾಡುವುದೇ?

ಅಧ್ಯಕ್ಷರು :– ಅಲ್ಲ, ಬಹಳ ಮಂತ್ರಿಗಳಿಗೆ ಎಷ್ಟೇ ಸೂಚನೆ ಕೊಟ್ಟರು ಬರುವುದಿಲ್ಲ, ನಾನೇನಪ್ಪ ಮಾಡಲಿ, ಅದಕ್ಕೆ ನಾನು ಈ ಗಾದೆಯನ್ನು ಹೇಳಿದ್ದು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಸರ್, ನಮ್ಮ, ನಿಮ್ಮ ಮೇಲೆ ಜವಾಬ್ದಾರಿ ಇದೆ, ಏಕೆಂದರೆ, ನಾವು ನೀವು ಎಲ್ಲರಿಗೂ ಕೂಡ ಜವಾಬ್ದಾರಿ ಇದೆ, ಆದುದರಿಂದ ಮುಖ್ಯಮಂತ್ರಿಗಳು ಈ ಬಗ್ಗೆ ಹೇಳಬೇಕು.

ಅಧ್ಯಕ್ಷರು :– ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ, ದಯಮಾಡಿ ಸದಸ್ಯರು ತಮ್ಮ ಸ್ಥಾನಕ್ಕೆ ಹೋಗಿ.

(ಸದನದ ಬಾವಿಯಲ್ಲಿ ಧರಣಿಯಲ್ಲಿದ್ದ ಮಾನ್ಯ ಸದಸ್ಯರು ತಮ್ಮ ಆಸನಕ್ಕೆ ತೆರಳಿದರು)

ಶ್ರೀ ಹೆಚ್.ಡಿ. ಕುಮಾರ ಸ್ವಾಮಿ (ಮುಖ್ಯಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ, ನಾನು ಆರ್ಥಿಕ ಇಲಾಖೆಯೊಡನೆ ಚರ್ಚೆ ಮಾಡುತ್ತೇನೆ. ಏಕೆಂದರೆ, ಮಹಾರಾಷ್ಟ್ರದಲ್ಲಿ ಏನು ತೆರಿಗೆ ಪದ್ಧತಿ ಇದೆ ಅದನ್ನು ಗಮನದಲ್ಲಿಟ್ಟುಕೊಂಡು, ನಮ್ಮ ಆರ್ಥಿಕ ಇಲಾಖೆ ಜೊತೆಗೂ ಚರ್ಚೆ ಮಾಡಿ, ಇವತ್ತೇನು ನಿಪ್ಪಾಣಿಯಲ್ಲಿ ಕಳೆದ ಎರಡು ಮೂರು ದಿವಸಗಳಿಂದ ಮಾಡಿರುವ ಧರಣಿ ಇದೆ, ಇವತ್ತು ಆ ಭಾಗದಲ್ಲಿರುವ ಹೆಣ್ಣುಮಕ್ಕಳು, ಏನು ಪ್ರತಿನಿತ್ಯ ಬೀಡಿ ಕಾರ್ಮಿಕರಿಗೆ ಕೆಲಸ ಮಾಡುತ್ತಿದ್ದಾರೆ, ಇದನ್ನೆಲ್ಲಾ ಈ ಸದನದ ಗಮನಕ್ಕೆ ತಂದಿದ್ದೀರಿ. ಈ ಬಗ್ಗೆ ನಾನು ನಾಳೆ ಸಮಗ್ರವಾಗಿ ಚರ್ಚೆ ಮಾಡಿ, ನಾಳೆ ಬೆಳಿಗ್ಗೆ ಸದನದ ಮುಂದೆ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಇಂಧನ ಹಾಗೂ ಲೋಕೋಪಯೋಗಿ ಸಚಿವರು) :– ಬರಿ ನಿಪ್ಪಾಣಿ ಭಾಗದಲ್ಲಿ ಮಾತ್ರವಲ್ಲ, ಮಂಗಳೂರು, ಹಾಸನ ಈ ಎಲ್ಲಾ ಕಡೆಯು ಇದೆ, ಅದಕ್ಕೆ ದಯಮಾಡಿ, ಅದನ್ನು ಗಂಭೀರವಾಗಿ ಚರ್ಚೆ ಮಾಡಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಈಗ ಮಂತ್ರಿಗಳೇ ಸಲಹೆ ಕೊಡುತ್ತಿದ್ದಾರೆ, He himself is a Government.